# ಕೋವಿಡ್–19 ಜನಜಾಗೃತಿ ಮತ್ತು ಪರಿಹಾರ ಆಂದೋಲನ

# COVID-19 RELIEF AND AWARENESS CAMPAIGN

ಕೋವಿಡ್ 19ರ ಸಾಂಕ್ರಾಮಿಕ ರೋಗವು ಬಂದ ನಂತರ ಜನಜೀವನ ಅಸ್ತವ್ಯಸ್ತವಾಗಿದ್ದು, ಇದರ ಪರಿಣಾಮವಾಗಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಪರಿಸ್ಥಿತಿಯು ಜನರ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರಿರುತ್ತದೆ. ಅದರಲ್ಲೂ ಮಕ್ಕಳ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಆರೋಗ್ಯ ಹಾಗೂ ಕಲಿಕೆಯ ಮೇಲೂ ನಕಾರಾತ್ಮಕ ಪರಿಣಾಮ ಬೀರಿರುವುದು ಗಮನಾರ್ಹ ಅಂಶವಾಗಿದೆ.

ಈ ನಿಟ್ಟಿನಲ್ಲಿ ಪಡಿ ಸಂಸ್ಥೆಯು ಕಳೆದೆರಡು ವರ್ಷಗಳಿಂದ ಕೋವಿಡ್ 19 ಸೋಂಕು ಹರಡದಂತೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಜನಜಾಗೃತಿ ಹಾಗೂ ಸೋಂಕಿನಿಂದ ನೊಂದವರಿಗೆ ಪರಿಹಾರ ನೀಡುವ ಮತ್ತು ಕೋವಿಡ್ ಸೋಂಕು ಹರಡದಂತೆ ಸುಧಾರಣಾ ಅಂಶಗಳ ಬಗೆಗಿನ ಸಮೀಕ್ಷೆಗಳನ್ನು ನಡೆಸುತ್ತಿದ್ದು ಜನಜಾಗೃತಿಗಾಗಿ ಶ್ರಮಿಸುತ್ತಾ ಇದೆ. ಈ ಜನಜಾಗೃತಿ ಆಂದೋಲನಕ್ಕೆ ಅನೇಕ ದಾನಿಗಳು, ಜನಪ್ರತಿನಿಧಿಗಳು, ಸಂಘಸಂಸ್ಥೆಗಳು ಹಾಗೂ ಇಲಾಖೆಗಳು ಸಹಭಾಗಿತ್ವವನ್ನು ನೀಡುತ್ತಾ ಬಂದಿರುತ್ತದೆ. ಈ ಆಂದೋಲನದಲ್ಲಿ ತಾವೆಲ್ಲರೂ ಭಾಗವಹಿಸಿ ಕೊರೋನಾಮುಕ್ತ ಸಮಾಜ ನಿರ್ಮಾಣದಲ್ಲಿ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇವೆ.

## ‘ಕೊರೋನಾ ಸೋಂಕು ಮುಕ್ತ ಗ್ರಾಮದಲ್ಲಿ ಮಕ್ಕಳ ಶಿಕ್ಷಣ’

### ಪರಿಶೀಲನಾಪಟ್ಟಿ

ಕೋವಿಡ್ 19ರ ಪರಿಣಾಮ ಬಹುತೇಕ ದಿನಗಳಿಂದ ಶಾಲೆಗಳು ಮುಚ್ಚಿದ್ದು ಹಲವಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ಬಾಲಕಾರ್ಮಿಕತೆ, ಬಾಲ್ಯವಿವಾಹ, ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಗೆ ಒಳಗಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ

ಎಲ್ಲ ಮಕ್ಕಳ ಜೀವ ಮತ್ತು ಜೀವನದ ಪ್ರಶ್ನೆಯಾಗಿ ಈ ಸವಾಲನ್ನು ಎದುರಿಸಲು ಮತ್ತು ಕೊರೊನಾಮುಕ್ತ ಗ್ರಾಮದಲ್ಲಿ ಮಕ್ಕಳ ಶಿಕ್ಷಣವನ್ನು ಮೇಲ್ವಿಚಾರಣೆ ಮಾಡಲು ಸಾಧ್ಯತೆಗಳ ಕುರಿತಾಗಿ ಈ ಕೆಳಗೆ ಕೆಲವೊಂದು ಅಂಶಗಳನ್ನು ಪಟ್ಟಿ ಮಾಡಲಾಗಿದೆ. ಈ ಅಂಶಗಳನ್ನು ಸ್ಥಳೀಯ ಸರಕಾರ ಅಂದರೆ, ನಗರ/ಪುರಸಭೆ/ಪಟ್ಟಣ/ಗ್ರಾಮಪಂಚಾಯತ್‌ಗಳು ತಮ್ಮ ಯೋಜನಾ ಚಟುವಟಿಕೆಗಳಲ್ಲಿ ಸೇರಿಸಿಕೊಂಡು ಸುಸ್ಥಿರ ಅಭಿವೃದ್ಧಿ ಹಾಗೂ ವಿಶ್ವಸಂಸ್ಥೆಯ ಗುರಿಗಳಾದ 'ಎಲ್ಲಾ ಮಕ್ಕಳಿಗೂ ಶಿಕ್ಷಣ, ಆರೋಗ್ಯ ಮತ್ತು ರಕ್ಷಣೆ'ಯ ಆಶೋತ್ತರಗಳನ್ನು ಈಡೇರಿಸಬಹುದಾಗಿದೆ.

1. ಸ್ಥಳೀಯ ಸರಕಾರವು ತಮ್ಮ ಆಡಳಿತದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಸಮಿತಿಯನ್ನು ರಚಿಸಿ ಪ್ರತೀ ತಿಂಗಳು ಸಭೆ ನಡೆಸುತ್ತಿದೆ.

2. ಸ್ಥಳೀಯ ಸರಕಾರವು ತಮ್ಮ ಆಡಳಿತದಲ್ಲಿ ಕೋವಿಡ್ ಕಾರ್ಯಪಡೆ ರಚಿಸಿ ಪ್ರತೀ ತಿಂಗಳು ಸಭೆ ನಡೆಸುತ್ತಿದೆ.

3. ಸ್ಥಳೀಯ ಸರಕಾರವು ತನ್ನ ಆಡಳಿತ ವ್ಯಾಪ್ತಿಯ ಶಾಲೆಗಳಲ್ಲಿ ಪ್ರತಿ ತಿಂಗಳು ನಡೆಯುವ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಮಕ್ಕಳ ಆರೋಗ್ಯ ದೃಷ್ಟಿಯಿಂದ ಕೋವಿಡ್ 19 ಕ್ಕೆ ಸಂಬಂಧಿಸಿದ ವಿಷಯಗಳ ಕಾರ್ಯಸೂಚಿ ಇದ್ದು ಸಭೆ ನಡೆಸುತ್ತಿರುವುದನ್ನು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿದೆ.

4. ಸ್ಥಳೀಯ ಸರಕಾರವು ತನ್ನ ಆಡಳಿತ ವ್ಯಾಪ್ತಿಯ ಶಾಲಾ ಎಸ್.ಡಿ.ಎಂ.ಸಿ.ಯು ಕನಿಷ್ಠ ಪ್ರತಿ 3 ತಿಂಗಳಿಗೊಮ್ಮೆ ತನ್ನ ಶಾಲಾ ಮಕ್ಕಳ ಹೆತ್ತವರ ಸಭೆಯನ್ನು ನಡೆಸಿ ಕೋವಿಡ್ 19 ಮಕ್ಕಳಿಗೆ ಹರಡದಂತೆ ಮತ್ತು ಮಕ್ಕಳ ಆರೋಗ್ಯ ರಕ್ಷಣೆಯ ಕುರಿತಾದ ವಿಷಯಗಳ ಬಗ್ಗೆ ಗಮನ ಹರಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದೆ.

5. ಸ್ಥಳೀಯ ಸರಕಾರವು ತಮ್ಮ ಆಡಳಿತದಲ್ಲಿ ವಾರ್ಡ್ ಕೋವಿಡ್ ಸಮಿತಿ ರಚಿಸಿ ಪ್ರತೀ ತಿಂಗಳು ಸಭೆ ನಡೆಸುತ್ತಿದೆ.

6. ಸ್ಥಳೀಯ ಸರಕಾರವು ತಮ್ಮ ಆಡಳಿತದಲ್ಲಿರುವ ಕೋವಿಡ್ ಕಾರ್ಯಪಡೆಯ ಮೂಲಕ ಕೋವಿಡ್ ನಿರ್ಮೂಲನೆ ಅಥವಾ ಸಾಮುದಾಯಿಕವಾಗಿ ಹರಡದಂತೆ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ.

7. ಸ್ಥಳೀಯ ಸರಕಾರವು ತಮ್ಮ ಆಡಳಿತದಲ್ಲಿ ಕೋವಿಡ್ ಸೋಂಕಿನಿಂದಾಗಿ ಮಕ್ಕಳನ್ನೊಳಗೊಂಡಂತೆ ಎಲ್ಲಾ ನಾಗರಿಕರನ್ನು ರಕ್ಷಿಸಲು ಕೋವಿಡ್ ಕಾರ್ಯಪಡೆ ಸಮಿತಿಯಲ್ಲಿ ಸ್ಥಳೀಯ ಸಂಘಸಂಸ್ಥೆಗಳ ಪ್ರತಿನಿಧಿಗಳನ್ನು ಮತ್ತು ಆಸಕ್ತರನ್ನು ಸೇರಿಸಲಾಗಿದ್ದು, ಕಾರ್ಯಪಡೆ ಸಮಿತಿಗೆ ಆಹ್ವಾನಿಸುತ್ತಿದೆ.

8. ಸ್ಥಳೀಯ ಸರಕಾರವು ಕೋವಿಡ್‌ಗೆ ಸಂಬಂಧಿಸಿದಂತೆ ಸ್ಥಳೀಯ ನಾಗರಿಕರಿಗೆ ಯಾವುದೇ ಸಂದರ್ಭದಲ್ಲಿ ದಿನದ 24 ಗಂಟೆಗಳಲ್ಲಿ ಯಾವುದೇ ರೀತಿಯ ಸೇವೆ ಯಾ ಮಾಹಿತಿಗಳನ್ನು ನೀಡಲು ನಿರಂತರ ಕಾರ್ಯಾಚರಿಸುತ್ತಿದೆ.

9. ಸ್ಥಳೀಯ ಸರಕಾರವು ಕೋವಿಡ್‌ಗೆ ಸಂಬಂಧಿಸಿ ದಿನದ 24 ಗಂಟೆಗಳಲ್ಲಿ ಸೇವೆ ಯಾ ಮಾಹಿತಿಗಳನ್ನು ನೀಡಲು ಕಾರ್ಯಕರ್ತರನ್ನು ನಿಯುಕ್ತಿಗೊಳಿಸಿದೆ.

10. ಸ್ಥಳೀಯ ಸರಕಾರವು ಕೋವಿಡ್ ಸೋಂಕು ಇತರರಿಗೆ ಹರಡದಂತೆ ಕೋವಿಡ್ ಸೋಂಕಿತರನ್ನು ಪ್ರತ್ಯೇಕವಾಗಿರಿಸಲು ವಿಶೇಷವಾಗಿ ಮಕ್ಕಳಿಗೆ ಐಸೋಲೇಶನ್ ಕೇಂದ್ರಗಳನ್ನು ಗುರುತಿಸಿದೆ.

11. ಸ್ಥಳೀಯ ಸರಕಾರವು ಕೋವಿಡ್ ಸೋಂಕಿತರಿಗೆ, ವಿಶೇಷವಾಗಿ ಮಕ್ಕಳಿಗೆ ಮೂಲಭೂತ ಸೌಕರ್ಯಗಳಾದ ಬಿಸಿನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆ, ಹಾಸಿಗೆ/ಬೆಡ್, ಪೌಷ್ಟಿಕಾಂಶ ಆಹಾರ ಮತ್ತು ಔಷಧಿಗಳನ್ನು ಒದಗಿಸುತ್ತಿದೆ.

12. ಸ್ಥಳೀಯ ಸರಕಾರವು 18 ವರ್ಷದೊಳಗಿನ ಮಕ್ಕಳಿಗೆ ನೀಡುವ ಕಬ್ಬಿಣಾಂಶವುಳ್ಳ ಮತ್ತು ಜಂತುಹುಳದ ಮಾತ್ರೆಗಳನ್ನು ಗ್ರಾಮದ ಎಲ್ಲಾ ಮಕ್ಕಳಿಗೆ ವಿತರಣೆಯಾಗುತ್ತಿರುವುದನ್ನು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿದೆ.

13. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲಾ ವ್ಯಾಪ್ತಿಯ 6 ರಿಂದ 14 ವರ್ಷದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾತಿಯಾಗಿ ನಿರಂತರ ಹಾಜರಾಗುವಂತೆ ಮೇಲ್ವಿಚಾರಣೆ ವಹಿಸುತ್ತಿದೆ.

14. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಆರೋಗ್ಯ ತಪಾಸಣೆ ಕೈಗೊಳ್ಳಲು ದೇಹದ ಉಷ್ಣತೆಯನ್ನು ಅಳೆಯುವ ಥರ್ಮಾಮೀಟರ್‌ನ ಲಭ್ಯತೆ ಮತ್ತು ಪ್ರತೀ ದಿನವೂ ಮಕ್ಕಳ ದೇಹದ ಉಷ್ಣತೆಯನ್ನು ಪರಿಶೀಲಿಸುವ ಬಗ್ಗೆ ಮೇಲ್ವಿಚಾರಣೆ ವಹಿಸುತ್ತಿದೆ.

15. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಪ್ರಾಥಮಿಕ ಶಾಲೆಯಲ್ಲಿ ತರಗತಿವಾರು ಮಕ್ಕಳಿಗೆ ಬೋಧಿಸುವ ಕಾರ್ಯವಿಧಾನಗಳ ಬಗ್ಗೆ ಎಸ್‌ಡಿಎಂಸಿಯು ಶಿಕ್ಷಕರೊಂದಿಗೆ ಚರ್ಚೆ ನಡೆಸಿ, ಶಿಕ್ಷಣಾಸಕ್ತ ಸ್ವಯಂಸೇವಕರ ಸಹಾಯದಿಂದ ಮಕ್ಕಳ ಮನೆಭೇಟಿ ಮತ್ತು ಕಲಿಕಾ ಪ್ರಕ್ರಿಯೆಗಳು (ಉದಾ:ರೇಡಿಯೋ ಪಾಠ, ಟೆಲಿಗ್ರಾಂ ಆಪ್, ವಾಟ್ಸಾಪ್, ಝೂಮ್, ವೀಡಿಯೋ, ಸ್ವಯಂಸೇವಕರ ಮೂಲಕ) ನಡೆಯುತ್ತಿರುವುದನ್ನು ಮೇಲ್ವಿಚಾರಣೆ ನಡೆಸುತ್ತಿದೆ.

16. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳ ಎಸ್‌ಡಿಎಂಸಿ ಅಧ್ಯಕ್ಷ, ಕಾರ್ಯದರ್ಶಿಯವರನ್ನು ಸ್ಥಳೀಯ ಸರಕಾರದ ಮಟ್ಟದಲ್ಲಿರುವ ಶಿಕ್ಷಣಪಡೆ ಸಮಿತಿ ಸಭೆಗೆ ನಿರಂತರವಾಗಿ ಭಾಗವಹಿಸುವಂತೆ ಕ್ರಮ ಕೈಗೊಳ್ಳುತ್ತಿದೆ.

17. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲಾ ಮಕ್ಕಳ ಶೈಕ್ಷಣಿಕ ಆರೋಗ್ಯ ಮತ್ತು ರಕ್ಷಣೆಯ ಭಾಗವಾಗಿ ಅನುಷ್ಠಾನಿಸಲಿರುವ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ, ಅನುಸರಣೆ ಮಾಡುತ್ತಿದೆ.

18. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲಾ ತರಗತಿ ಕೋಣೆಯಲ್ಲಿ ಗರಿಷ್ಟ ಪ್ರತೀ ಎರಡು ಮಕ್ಕಳಿಗೆ ಒಂದು ಬೆಂಚ್ ಮತ್ತು ಒಂದು ಡೆಸ್ಕ್‌ಗಳ ಒದಗಣೆ ಇರುವುದನ್ನು ಮೇಲ್ವಿಚಾರಣೆ ನಡೆಸುತ್ತಿದೆ.

19. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಕೈಕಾಲುಗಳನ್ನು ತೊಳೆಯಲು ನೀರಿನ ಘಟಕಗಳು ಇರುವುದನ್ನು ಖಾತ್ರಿಪಡಿಸುತ್ತಿದೆ.

20. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಕೈಕಾಲುಗಳನ್ನು ತೊಳೆಯಲು ಇರುವ ನೀರಿನ ಘಟಕಗಳಲ್ಲಿ ಸಾಕಷ್ಟು ಪ್ರಮಾಣದ ನೀರಿನ ಸೌಲಭ್ಯವನ್ನು ನಿರಂತರವಾಗಿ ಒದಗಿಸುತ್ತಿದೆ.

21. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಕೈಕಾಲುಗಳನ್ನು ತೊಳೆಯಲು ಇರುವ ನೀರಿನ ಘಟಕಗಳಲ್ಲಿ ಹ್ಯಾಂಡ್ ಸ್ಯಾನಿಟೈಸರ್/ ಸೋಪ್ ವ್ಯವಸ್ಥೆಯನ್ನು ನಿರಂತರವಾಗಿ ಒದಗಿಸುತ್ತಿದೆ.

22. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕೋವಿಡ್ ಮುನ್ನೆಚ್ಚರಿಕೆಯಾಗಿ ಸಂಪೂರ್ಣ ಸುಸಜ್ಜಿತವಾದ ಮತ್ತು ಸ್ವಚ್ಛತೆಯ ಎಲ್ಲಾ ವ್ಯವಸ್ಥೆ (ಸಾಕಷ್ಟು ಪ್ರಮಾಣದಲ್ಲಿ ನೀರು, ಬ್ರಶ್, ಫಿನಾಯಿಲ್, ಬಕೆಟ್, ಮಗ್, ನೀರಿನ ನಳ್ಳಿ ಇತ್ಯಾದಿ)ಗಳನ್ನು ಹೊಂದಿರುವ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯವು ಕಾರ್ಯಾಚರಿಸುವಂತೆ ಮೇಲ್ವಿಚಾರಣೆ ನಡೆಸುತ್ತಿದೆ.

23. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕೋವಿಡ್ ಸೋಂಕಿನ ಮುನ್ನೆಚ್ಚರಿಕಾ ವ್ಯವಸ್ಥೆಗಾಗಿ ಶುದ್ಧ ಕುಡಿಯುವ ಬಿಸಿನೀರಿನ ವ್ಯವಸ್ಥೆಗಳನ್ನು ಶಾಲಾ ತರಗತಿಗಳಲ್ಲಿ ಎಲ್ಲಾ ಮಕ್ಕಳಿಗೂ ಲಭ್ಯವಾಗುತ್ತಿರುವುದನ್ನು ಮೇಲ್ವಿಚಾರಣೆ ನಡೆಸುತ್ತಿದೆ.

24. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಶಾಲಾ ಎಸ್‌ಡಿಎಂಸಿಯು ಕೋವಿಡ್ ಸೋಂಕಿನಿಂದ ಮಕ್ಕಳು ಪೋಷಕರನ್ನು ಕಳಕೊಂಡಲ್ಲಿ ಮಕ್ಕಳ ಸಹಾಯವಾಣಿ-1098ಗೆ ತಿಳಿಸುವಂತೆ ಸಮುದಾಯಕ್ಕೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

25. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ನಿರಂತರ ಗೈರುಹಾಜರಾಗುವ ಮಕ್ಕಳಿಗೆ ಗ್ರಾಮ ಶಿಕ್ಷಣಪಡೆಯ ಸಹಾಯದಿಂದ ಮಕ್ಕಳು ಶಾಲೆಗೆ ಹಾಜರಾಗುವಂತೆ ಮೇಲ್ವಿಚಾರಣಾ ಕ್ರಮಗಳನ್ನು ಕೈಗೊಳ್ಳುತ್ತಿದೆ.

26. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ನಿರಂತರ ಗೈರುಹಾಜರಾಗುತ್ತಿರುವ ಮಕ್ಕಳು ಬಾಲ್ಯವಿವಾಹ, ಬಾಲಕಾರ್ಮಿಕತೆ, ಮಕ್ಕಳ ಮೇಲೆ ಯಾವುದೇ ರೀತಿಯ ಲೈಂಗಿಕ ಶೋಷಣೆ ಹಾಗೂ ದೌರ್ಜನ್ಯಗಳು, ಮಾರಾಟ ಸಾಗಾಟದಂತಹ ಘಟನೆಗಳು ನಡೆದಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳ ಗಮನಕ್ಕೆ ತಂದು, ಮಕ್ಕಳ ರಕ್ಷಣೆಗೆ ಕ್ರಮ ಕೈಗೊಳ್ಳುತ್ತಿದೆ. ಮಾತ್ರವಲ್ಲದೆ ಸಮುದಾಯಕ್ಕೆ ಜಾಗೃತಿ ಕಾರ್ಯಕ್ರಮಗಳನ್ನೂ ನಡೆಸುತ್ತಿದೆ.

27. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕನಿಷ್ಠ ವಾರಕ್ಕೊಮ್ಮೆ ಶಾಲೆಯ ಇಡೀ ಆವರಣ/ಶಾಲಾ ಕಂಪೌಂಡ್, ಮುಖ್ಯ ದ್ವಾರ, ಶಾಲಾ ಮೆಟ್ಟಿಲುಗಳ ದೂಳು ಒರಸಿ ಸೋಂಕು ನಿವಾರಣಾ ದ್ರಾವಣದಿಂದ ತೊಳೆದು ಶುದ್ಧಗೊಳಿಸಲು ಕ್ರಮವಹಿಸಿ, ಮೇಲ್ವಿಚಾರಣೆ ಮಾಡುತ್ತಿದೆ.

28. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕನಿಷ್ಠ ವಾರಕ್ಕೊಮ್ಮೆ ಶಾಲಾ ಕಟ್ಟಡದ ಮೇಲ್ಛಾವಣಿ, ಬಾಗಿಲು, ಕಿಟಕಿಗಳ ದೂಳನ್ನು ತೆಗೆದು ಸೋಂಕು ನಿವಾರಣಾ ದ್ರಾವಣದಿಂದ ಸ್ವಚ್ಛಗೊಳಿಸಲು ಕ್ರಮವಹಿಸಿ, ಮೇಲ್ವಿಚಾರಣೆ ಮಾಡುತ್ತಿದೆ.

29. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕನಿಷ್ಠ ವಾರಕ್ಕೊಮ್ಮೆ ಶಾಲೆಯಲ್ಲಿನ ಎಲ್ಲಾ ತರಗತಿ ಕೋಣೆಗಳು, ಶಿಕ್ಷಕರ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಸಭಾಂಗಣವನ್ನು ಒಳಗೊಂಡಂತೆ ಮಕ್ಕಳು ಮತ್ತು ಶಿಕ್ಷಕರು ಬಳಸುವ ಸ್ಥಳಗಳನ್ನು ಗುಡಿಸಿ, ಸೋಂಕು ನಿವಾರಣಾ

ದ್ರಾವಣ (ಕ್ಲೋರಿನ್)ದಿಂದ ತೊಳೆದು ಸ್ವಚ್ಛಗೊಳಿಸಲು ಕ್ರಮವಹಿಸಿ, ಮೇಲ್ವಿಚಾರಣೆ ಮಾಡುತ್ತಿದೆ.

30. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕನಿಷ್ಟ ವಾರಕ್ಕೊಮ್ಮೆ ಶಾಲಾ ಕೊಠಡಿಯ ಒಳಗಿರುವ ಪೀಠೋಪಕರಣಗಳಾದ ಮೇಜು, ಕುರ್ಚಿ, ಡೆಸ್ಕ್, ಬೆಂಚ್, ಬಾಗಿಲು ಕಿಟಕಿ ಮತ್ತು ಕಾರಿಡಾರ್‌ಗಳಿಗೆ ಅಳವಡಿಸಿರುವ ಹಿಡಿ, ಚಿಲಕ ಮತ್ತು ಸರಳುಗಳನ್ನು ನೀರಿನಿಂದ ತೊಳೆದು, ಹೈಪೋಕ್ಲೋರೈಡ್ ದ್ರಾವಣದಿಂದ ನೈರ್ಮಲೀಕರಣ ಮಾಡಲು ಕ್ರಮವಹಿಸಿ, ಮೇಲ್ವಿಚಾರಣೆ ಮಾಡುತ್ತಿದೆ.

31. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕನಿಷ್ಟ ವಾರಕ್ಕೊಮ್ಮೆ ಶಾಲೆಯಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ಭಾಗವಾದ ನೀರಿನಪಂಪು, ಓವರ್ ಹೆಡ್ ಟ್ಯಾಂಕ್‌ಗಳಲ್ಲಿ ಈಗಾಗಲೇ ಸಂಗ್ರಹವಾಗಿರುವ ನೀರನ್ನು ಖಾಲಿ ಮಾಡಿ ಕ್ಲೋರಿನ್ ಆಧಾರಿತ ಶುಚಿಗೊಳಿಸುವ ಪೌಡರ್‌ನಿಂದ ಸ್ವಚ್ಛಗೊಳಿಸಿ, ಒಣಗಿಸಿ ನಂತರವೇ ಸ್ವಚ್ಛ ನೀರನ್ನು ತುಂಬಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದೆ.

32. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕನಿಷ್ಟ ವಾರಕ್ಕೊಮ್ಮೆ ಶಾಲೆಯಲ್ಲಿನ ಶೌಚಾಲಯ ಮತ್ತು ಮೂತ್ರಾಲಯಗಳನ್ನು 1% ಹೈಪೋಕ್ಲೋರೈಟ್ ದ್ರಾವಣ ಬಳಸಿ ಸ್ವಚ್ಛಗೊಳಿಸಿ ಮಕ್ಕಳ ಬಳಕೆಗೆ ಒದಗಿಸುತ್ತಿರುವ ಬಗ್ಗೆ ಕ್ರಮವಹಿಸಿ, ಮೇಲ್ವಿಚಾರಣೆ ನಡೆಸುತ್ತಿದೆ.

33. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಕನಿಷ್ಟ ವಾರಕ್ಕೊಮ್ಮೆ ಅಕ್ಷರದಾಸೋಹದ ಅಡುಗೆಕೋಣೆ, ದಾಸ್ತಾನು ಕೊಠಡಿಯಲ್ಲಿನ ಎಲ್ಲ ವಸ್ತುಗಳಾದ ಪಾತ್ರೆಗಳು, ಸ್ಟೌ, ಗ್ಯಾಸ್ ಸಿಲಿಂಡರ್, ಆಹಾರಧಾನ್ಯಗಳನ್ನು ಶೇಖರಣಾ ಡಬ್ಬಗಳು ಇತ್ಯಾದಿಗಳನ್ನು ಡಿಟರ್ಜೆಂಟ್ ಬಳಸಿ ಬಿಸಿನೀರಿನಿಂದ ತೊಳೆದು ಒಣಗಿಸಿ ಸ್ವಚ್ಛಗೊಳಿಸುತ್ತಿರುವ ಬಗ್ಗೆ ಕ್ರಮವಹಿಸಿ, ಮೇಲ್ವಿಚಾರಣೆ ನಡೆಸುತ್ತಿದೆ.

34. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಮಕ್ಕಳಿಗೆ ಮಾಸ್ಕ್ ಸ್ಯಾನಿಟೈಸರ್, ಸೋಪ್ ಇತ್ಯಾದಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವ ಜವಾಬ್ದಾರಿ ವಹಿಸುತ್ತಿದೆ.

35. ಸ್ಥಳೀಯ ಸರಕಾರವು ತನ್ನ ಆಡಳಿತಕ್ಕೊಳಪಟ್ಟ ಶಾಲೆಗಳಲ್ಲಿ ಶಾಲೆಯು ಸಂಪರ್ಕಿಸಬಹುದಾದ ದೂರದಲ್ಲಿ ವೈದ್ಯಕೀಯ ಸಿಬ್ಬಂದಿ ಲಭ್ಯವಿರುವುದನ್ನು ಖಚಿತಪಡಿಸಿ, ಅಂತಹ ವೈದ್ಯಕೀಯ ಸಿಬ್ಬಂದಿಯ ದೂರವಾಣಿ ಸಂಖ್ಯೆಯನ್ನು ಶಾಲೆಯ ಸೂಚನಾಫಲಕದಲ್ಲಿ ಪ್ರದರ್ಶಿಸಿರುವುದನ್ನು ಖಾತ್ರಿಪಡಿಸುತ್ತಿದೆ.

36. ಶಾಲಾ ಎಸ್‌ಡಿಎಂಸಿಯು ಪ್ರತೀದಿನ ಶಾಲೆ ಪ್ರಾರಂಭದಿಂದ ಶಾಲೆ ಮುಕ್ತಾಯ ವಾಗುವವರೆಗೂ ಕೋವಿಡ್ 19 ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು ಕಡ್ಡಾಯವಾಗಿ ಅನುಸರಣೆಯ ಮೇಲ್ವಿಚಾರಣೆಗಾಗಿ ಓರ್ವ ಶಿಕ್ಷಕರನ್ನು ನೋಡಲ್ ಅಧಿಕಾರಿಯನ್ನು ನೇಮಿಸಿ ಕ್ರಮವಹಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದೆ.

*** *** ***

ಪ್ರಕಟಣೆ : **ಪಡಿ, ಮಂಗಳೂರು**

**ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಯೋಜನೆ 2020–2023**

**(ಶಿಕ್ಷಣ ಹಕ್ಕು ಕಾಯಿದೆ 2009ರ ಸಮರ್ಪಕ ಮೇಲುಸ್ತುವಾರಿಗಾಗಿ ಎಸ್‌ಡಿಎಂಸಿ ಸಬಲೀಕರಣ)**

**18 ವರ್ಷದೊಳಗಿನ ಮಕ್ಕಳು ಸಂಕಷ್ಟದಲ್ಲಿದ್ದರೆ**



**ಮಕ್ಕಳ ಸಹಾಯವಾಣಿ 1098ಗೆ ಕರೆಮಾಡಿ**